# ಸಂಪೂರ್ಣ ಗ್ರ್ಯಾಂಡ್ ಚಾಲೆಂಜ್ 2026

## ಕರ್ನಾಟಕದಲ್ಲಿ ಆಹಾರ ನಷ್ಟ ಕಡಿಮೆಮಾಡುವುದು

## ಅರ್ಜಿದಾರರಿಂದ ಹೆಚ್ಚಾಗಿ ಕೇಳಲಾಗುವ ಪ್ರಶ್ನೆಗಳು (FAQ)

## ಸಂಪೂರ್ಣ ಗ್ರ್ಯಾಂಡ್ ಚಾಲೆಂಜ್ ಕುರಿತ ಪ್ರಶ್ನೆಗಳು

### 1. ಈ ಚಾಲೆಂಜ್ ಕುರಿತ ವಿವರ ಏನಿದೆ?

**ಉತ್ತರ:** ಸಂಪೂರ್ಣ ಗ್ರ್ಯಾಂಡ್ ಚಾಲೆಂಜ್ 2026 ಕರ್ನಾಟಕ ಸರ್ಕಾರದ ನವೀನ ಉಪಕ್ರಮವಾಗಿದ್ದು, ಗ್ಲೋಬಲ್ ಅಲೈಯನ್ಸ್ ಫಾರ್ ಇಂಪ್ರೂವ್ಡ್ ನ್ಯೂಟ್ರಿಷಿಯನ್ (GAIN), ನ್ಯೂಟ್ರಿಷಿಯನ್ ಕನೆಕ್ಟ್ಸ್ (NC) ಮತ್ತು ಥಿಂಕ್‌ಥ್ರೂ ಕನ್ಸಲ್ಟಿಂಗ್ (TTC) ಮತ್ತು ಅಸೋಸಿಯೆಷನ್ ಆಫ್ ಬ್ಯೂಸಿನೆಸ್ ವುಮೆನ್ ಇನ್ ಕಾಮರ್ಸ್ ಆಂಡ್ ಇಂಡಸ್ಟ್ರಿ (ABWCI) ರವರ ಸಹಯೋಗದಲ್ಲಿ ಆರಂಭಿಸಿದೆ.

ಸ್ಟಾರ್ಟ್‌ಅಪ್‌ಗಳು, ಉದ್ಯಮಿಗಳು, ಅಕಾಡೆಮಿಕ್ ಸಂಸ್ಥೆಗಳು, ಎಫ್‌ಪಿಒಗಳು (FPO), ಕೃಷಿ ಉದ್ಯಮಗಳು ಮೊದಲಾದವರನ್ನು ತೊಡಗಿಸಿಕೊಂಡು, ಕರ್ನಾಟಕದ ತೋಟಗಾರಿಕೆ ಮೌಲ್ಯ ಸರಪಳಿಯಲ್ಲಿ ಉಂಟಾಗುವ ಆಹಾರ ನಷ್ಟವನ್ನು ಕಡಿಮೆ ಮಾಡುವ ಹೊಸ, ಸ್ಥಳೀಯ ಆವಿಷ್ಕಾರಗಳನ್ನು ಗುರುತಿಸಿ, ಬೆಳೆಸುವುದು ಮತ್ತು ವಿಸ್ತರಿಸುವುದು. ಈ ಚಾಲೆಂಜ್‌ನ ಉದ್ದೇಶವಾಗಿರುತ್ತದೆ.

ಈ ಉಪಕ್ರಮವು, ಹೊಸ ಆವಿಷ್ಕಾರದಲ್ಲಿ ತೊಡಗಿಸಿಕೊಂಡವರಿಗೆ, ಸಂಘಟಿತ ಸ್ಪರ್ಧಾತ್ಮಕ ಪ್ರಕ್ರಿಯೆ, ತಜ್ಞರಿಂದ ಮಾರ್ಗದರ್ಶನ, ಖರೀದಿದಾರರು, ಹೂಡಿಕೆದಾರರು ಹಾಗೂ ಸರ್ಕಾರದೊಂದಿಗೆ ಸಂಪರ್ಕ (Deal Room), ಮತ್ತು ಆಯ್ಕೆಯಾದ ಪರಿಹಾರಗಳ ವಿಸ್ತರಣೆಗೆ ಅವಕಾಶ ನೀಡುತ್ತದೆ. ಗ್ಲೋಬಲ್ ಅಲೈಯನ್ಸ್ ಫಾರ್ ಇಂಪ್ರೂವ್ಡ್ ನ್ಯೂಟ್ರಿಷಿಯನ್ (GAIN), ಜಾಗತಿಕವಾಗಿ ನಡೆಸಿದ ಯಶಸ್ವಿ ಚಾಲೆಂಜ್‌ಗಳ ಅನುಭವದ ಆಧಾರದಲ್ಲಿ, ಈ ಕಾರ್ಯಕ್ರಮವು ಸರ್ಕಾರ, ಖಾಸಗಿ ವಲಯ, ಅಕಾಡೆಮಿಯಾ ಮತ್ತು ನಾಗರಿಕ ಸಮಾಜವನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ, ಸುಸ್ಥಿರ ಆಹಾರ ವ್ಯವಸ್ಥೆ ನಿರ್ಮಾಣದಲ್ಲಿ ರಾಜ್ಯವನ್ನು ಮುಂಚೂಣಿಯಲ್ಲಿ ತರಲು ಉತ್ತೇಜನ ನೀಡುತ್ತದೆ.

### 2. ಈ ಚಾಲೆಂಜ್‌ನಲ್ಲಿ ಭಾಗವಹಿಸುವುದರಿಂದ ನನ್ನ ಸಂಸ್ಥೆಗೆ ಸಿಗುವ ಲಾಭ ಏನು ?

**ಉತ್ತರ:** ಈ ಸವಾಲು (Challenge) ನಿಮ್ಮ ನಾವೀನ್ಯತೆಗೆ ಹೆಚ್ಚಿನ ಮಾನ್ಯತೆಯನ್ನು ನೀಡುತ್ತದೆ ಮತ್ತು ವಿವಿಧ ವಲಯಗಳ ನಡುವಿನ ಪಾಲುದಾರಿಕೆಯನ್ನು ಬಲಪಡಿಸುತ್ತದೆ. ಅಲ್ಲದೆ, ಸರ್ಕಾರ, ಉದ್ಯಮ ಕ್ಷೇತ್ರ, ರೈತ ಉತ್ಪಾದಕ ಸಂಸ್ಥೆಗಳು (FPOs) ಮತ್ತು ಬಂಡವಾಳ ಹೂಡಿಕೆದಾರರನ್ನು ಒಂದೇ ವೇದಿಕೆಗೆ ತರುವ Ecosystem ಸಂಪರ್ಕವನ್ನು ಇದು ಒದಗಿಸುತ್ತದೆ. ಇದು ಕರ್ನಾಟಕದಲ್ಲಿ ನಿಮ್ಮ ನಾವೀನ್ಯತೆಯು ದೊಡ್ಡ ಮಟ್ಟದ ಪ್ರಭಾವವನ್ನು ಬೀರಲು ಒಂದು ಅರ್ಥಪೂರ್ಣ ಹಾದಿಯನ್ನು ನಿರ್ಮಿಸಿಕೊಡುತ್ತದೆ.

ಭಾಗವಹಿಸುವ ಸಂಸ್ಥೆಗಳು ಹಲವಾರು ಆಯಾಮಗಳಲ್ಲಿ ಪ್ರಯೋಜನಗಳನ್ನು ಪಡೆಯಲಿವೆ. ಅಂತಿಮ ಸುತ್ತಿಗೆ ಆಯ್ಕೆಯಾದವರು (Finalists), ಖರೀದಿದಾರರು, ಹೂಡಿಕೆದಾರರು ಮತ್ತು ಮಾರುಕಟ್ಟೆ ಸಂಪರ್ಕ ಪಾಲುದಾರರೊಂದಿಗೆ ಸಭೆಗಳನ್ನು ನಡೆಸಲು ಅನುಕೂಲವಾಗುವಂತೆ ವಿಶೇಷವಾಗಿ ವಿನ್ಯಾಸಗೊಳಿಸಲಾದ **'ಡೀಲ್ ರೂಮ್'** ಗೆ ಸಂಪರ್ಕ ಹೊಂದಲಿದ್ದಾರೆ. ವಿಜೇತರು ಪ್ರಶಂಶೆಯನ್ನು ಪಡೆಯುವುದಲ್ಲದೆ, ವಿವಿಧ ಸರ್ಕಾರಿ ಇಲಾಖೆಗಳು, ಖಾಸಗಿ ವಲಯ ಮತ್ತು ಅಭಿವೃದ್ಧಿ ಪಾಲುದಾರರ ಸಹಯೋಗದೊಂದಿಗೆ ಕಾರ್ಯಕ್ರಮದ ನಂತರದ ಪ್ರಾಯೋಗಿಕ ಯೋಜನೆ (Piloting) ಮತ್ತು ವಿಸ್ತರಣೆಗೆ (Scale-up) ಅಗತ್ಯವಿರುವ ಬೆಂಬಲವನ್ನು ಪಡೆಯಲಿದ್ದಾರೆ.

### 3. ಯಾವ ಬೆಳೆಗಳಿಗೆ ಹೆಚ್ಚಿನ ಆದ್ಯತೆ ಇದೆ?

**ಉತ್ತರ:** ಈ ಸವಾಲು (Challenge) ಏಳು ಪ್ರಮುಖ ಬೆಳೆಗಳಿಗೆ ವಿಶೇಷ ಆದ್ಯತೆಯನ್ನು ನೀಡುತ್ತದೆ: **ಈರುಳ್ಳಿ, ಮಾವು, ಬಾಳೆಹಣ್ಣು, ಟೊಮೆಟೊ, ದ್ರಾಕ್ಷಿ, ದಾಳಿಂಬೆ ಮತ್ತು ಅನಾನಸ್**. ಇತರ ಬೆಳೆಗಳಿಗೆ ಅನ್ವಯವಾಗುವ ಪರಿಹಾರಗಳನ್ನೂ ಸಹ ಸ್ವಾಗತಿಸಲಾಗುತ್ತದೆ, ಆದರೆ ಅವುಗಳು ಮೇಲೆ ತಿಳಿಸಿದ ಈ ಏಳು ಪ್ರಮುಖ ಬೆಳೆಗಳಿಗೆ ಅನ್ವಯಿಸುವ ಅಥವಾ ಅಳವಡಿಸಿಕೊಳ್ಳುವ ಸ್ಪಷ್ಟ ಸಾಮರ್ಥ್ಯವನ್ನು ಹೊಂದಿರಬೇಕು.

### 4. ಅರ್ಜಿ ಸಲ್ಲಿಸಲು ಶುಲ್ಕ ಇದೆಯೇ?

**ಉತ್ತರ:** ಇಲ್ಲ. ಸಂಪೂರ್ಣ ಗ್ರಾಂಡ್ ಚಾಲೆಂಜ್ 2026 (Sampurna Grand Challenge 2026) ರಲ್ಲಿ ಭಾಗವಹಿಸಲು ಯಾವುದೇ ಅರ್ಜಿ ಶುಲ್ಕವಿರುವುದಿಲ್ಲ. ಅರ್ಹವಿರುವ ಎಲ್ಲಾ ಅರ್ಜಿದಾರರಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಸಂಪೂರ್ಣವಾಗಿ ಉಚಿತವಾಗಿದೆ.

## ಅರ್ಹತೆ ಕುರಿತ ಪ್ರಶ್ನೆಗಳು

### 5. ಯಾರು ಅರ್ಜಿ ಸಲ್ಲಿಸಬಹುದು?

**ಉತ್ತರ:** ಕರ್ನಾಟಕದ ತೋಟಗಾರಿಕಾ ವಲಯದಲ್ಲಿ ಕೊಯ್ಲಿನ ನಂತರದ ಆಹಾರ ನಷ್ಟಕ್ಕೆ (post-harvest food lp) ಸಂಬಂಧಿಸಿದಂತೆ ನವೀನ ಪರಿಹಾರಗಳ ಮೇಲೆ ಕೆಲಸ ಮಾಡುತ್ತಿರುವ ಯಾವುದೇ ಕಾನೂನುಬದ್ಧವಾಗಿ ನೋಂದಾಯಿತ ಸಂಸ್ಥೆಗಳಿಗೆ ಈ ಸವಾಲು ಮುಕ್ತವಾಗಿದೆ.

ಇದು, ಸ್ಟಾರ್ಟ್‌ಅಪ್‌ಗಳು ಮತ್ತು ಅಗ್ರಿ–ಟೆಕ್ ಕಂಪನಿಗಳು, ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆಗಳು, ತಂತ್ರಜ್ಞಾನ ನಾವೀನ್ಯಕಾರರು ಮತ್ತು ಉತ್ಪನ್ನ ಅಭಿವರ್ಧಕರು, ರೈತ ಉತ್ಪಾದಕ ಸಂಸ್ಥೆಗಳು (FPOs), ಕೃಷಿ ಉದ್ಯಮಗಳು, ಕೃಷಿ, ಆಹಾರ ವ್ಯವಸ್ಥೆ ಮತ್ತು ಹವಾಮಾನ ನಾವೀನ್ಯತೆ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಮಾಜಿಕ ಉದ್ಯಮಗಳು ಮತ್ತು ಪರಿಸರ ವ್ಯವಸ್ಥೆಯ ಸಂಸ್ಥೆಗಳು, ಸಹಕಾರ ಸಂಘಗಳು, ಸ್ತ್ರೀಶಕ್ತಿ ಸಂಘಗಳು (SHGs) ಮತ್ತು ಸಮುದಾಯ ಉದ್ಯಮಗಳು. ಆರಂಭಿಕ ಹಂತದ ನಾವೀನ್ಯಕಾರರು ಮತ್ತು ಸಂಶೋಧನಾ ತಂಡಗಳಿಂದ ಹಿಡಿದು ಬೆಳವಣಿಗೆಯ ಹಂತದಲ್ಲಿರುವ (scaling) ಉದ್ಯಮಗಳವರೆಗೆ ಯಾವುದೇ ಹಂತದಲ್ಲಿರುವ ಸಂಸ್ಥೆಗಳು ಅರ್ಜಿ ಸಲ್ಲಿಸಬಹುದು. **ಮಹಿಳಾ ನೇತೃತ್ವದ ಸಂಸ್ಥೆಗಳು ಮತ್ತು ಯುವ ನಾವೀನ್ಯಕಾರರು** ಅರ್ಜಿ ಸಲ್ಲಿಸಲು ವಿಶೇಷ ಪ್ರೋತ್ಸಾಹ ನೀಡಲಾಗುತ್ತದೆ.

### 6. ಕರ್ನಾಟಕದಲ್ಲಿಯೇ ನಮ್ಮ ಸಂಸ್ಥೆಯ ಕಾರ್ಯಾಲಯ ಇರಬೇಕೇ?

**ಉತ್ತರ:** ಅವಶ್ಯಕವಿಲ್ಲ. ನಿಮ್ಮ ಸಂಸ್ಥೆಯ ಪ್ರಧಾನ ಕಛೇರಿಯು ಕರ್ನಾಟಕದಲ್ಲಿಯೇ ಇರಬೇಕೆಂದೇನೂ ಇಲ್ಲ. ಆದಾಗ್ಯೂ, ನಿಮ್ಮ ಪರಿಹಾರವು ಕರ್ನಾಟಕದಾದ್ಯಂತ ಅನ್ವಯಿಸಲು ಮತ್ತು ವಿಸ್ತರಿಸಲು (scalable) ಸಾಧ್ಯವಿರಬೇಕು. ಅಲ್ಲದೆ, ಈ ರಾಜ್ಯದಲ್ಲಿ ಕಾರ್ಯನಿರ್ವಹಿಸಲು ನಿಮಗೆ ಇರುವ ಸ್ಪಷ್ಟ ಉದ್ದೇಶ ಮತ್ತು ಸಾಮರ್ಥ್ಯವನ್ನು ನೀವು ಪ್ರದರ್ಶಿಸಬೇಕಾಗುತ್ತದೆ. ಈಗಾಗಲೇ ಕರ್ನಾಟಕದಲ್ಲಿ ಸಕ್ರಿಯವಾಗಿರುವ ಅಥವಾ ಕರ್ನಾಟಕದ ತೋಟಗಾರಿಕಾ ಸಂದರ್ಭಕ್ಕೆ ಅಳವಡಿಸಿಕೊಳ್ಳಬಹುದಾದ ಪರಿಹಾರಗಳಿಗೆ ವಿಶೇಷ ಪ್ರೋತ್ಸಾಹ ನೀಡಲಾಗುತ್ತದೆ.

### 7. ಎಲ್ಲಾ ವರ್ಗಗಳಿಗೂ ಅನ್ವಯವಾಗುವ ಸಾಮಾನ್ಯ ಅರ್ಹತಾ ಷರತ್ತುಗಳು ಯಾವುವು?

**ಉತ್ತರ:** ಎಲ್ಲಾ ವರ್ಗಗಳಲ್ಲಿ ಅರ್ಜಿ ಸಲ್ಲಿಸುವವರು ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕು:

1. **ಕಾನೂನುಬದ್ಧವಾಗಿ ನೋಂದಾಯಿತ ಸಂಸ್ಥೆಯಾಗಿ** ಅರ್ಜಿ ಸಲ್ಲಿಸಬೇಕು.
2. ಈಗಾಗಲೇ ಕರ್ನಾಟಕದಲ್ಲಿ **ಪರೀಕ್ಷಿಸಲ್ಪಟ್ಟ ಅಥವಾ ಮಾರುಕಟ್ಟೆಯಲ್ಲಿ ಅಳವಡಿಸಲು ಸಿದ್ಧವಿರುವ** ಪರಿಹಾರವನ್ನು ಹೊಂದಿರಬೇಕು.
3. ತಾವು ಅರ್ಜಿ ಸಲ್ಲಿಸುತ್ತಿರುವ ನಿರ್ದಿಷ್ಟ ಸವಾಲಿನ ವರ್ಗಕ್ಕೆ (Challenge category) **ನೇರವಾಗಿ ಸಂಬಂಧಿಸಿದ ಪರಿಹಾರವನ್ನು** ಹೊಂದಿರಬೇಕು.
4. ಕಳೆದ **2 ವರ್ಷಗಳ ಆಡಿಟ್ ಮಾಡಲಾದ ಹಣಕಾಸಿನ ವರದಿಗಳನ್ನು** (Audited financial statements) ಹೊಂದಿರಬೇಕು (MSME ಮತ್ತು FPOಗಳಾಗಿದ್ದಲ್ಲಿ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳನ್ನು ಸಲ್ಲಿಸಬಹುದು).

### 8. ನನ್ನ ಸಂಸ್ಥೆಯು ಆರಂಭಿಕ ಹಂತದಲ್ಲಿದೆ (ಇಚಿಡಿಟಥಿ ಖಣಚಿರಜ) - ನಾವು ಈ ಹಂತದಲ್ಲಿ ಅರ್ಜಿ ಸಲ್ಲಿಸಬಹುದೇ?

**ಉತ್ತರ:** ಹೌದು. ಈ ಚಾಲೆಂಜ್ ಯಾವುದೇ ಹಂತದಲ್ಲಿರುವ ಸಂಸ್ಥೆಗಳನ್ನು ಸ್ವಾಗತಿಸುತ್ತದೆ. ನಿಮ್ಮ ಪರಿಹಾರವು (Solution) ಪರೀಕ್ಷಿಸಲ್ಪಟ್ಟಿದೆಯೇ ಅಥವಾ ಮಾರುಕಟ್ಟೆಗೆ ಸಿದ್ಧವಾಗಿದೆಯೇ ಎಂಬುದು ಇಲ್ಲಿ ಮುಖ್ಯ. ನಿಮ್ಮ ಪರಿಹಾರವು(Solution) ಇನ್ನೂ ಸಂಶೋಧನೆ ಅಥವಾ ಕೇವಲ ಕಲ್ಪನೆಯ ಹಂತದಲ್ಲಿದ್ದರೆ (ಪೂರ್ವ–ಮಾದರಿ) ಅದನ್ನು ಪರಿಗಣಿಸಲಾಗುವುದಿಲ್ಲ. ಆದರೆ, ನಿಮ್ಮ ಬಳಿ ಕೆಲಸ ಮಾಡುವ ಮಾದರಿ ಅಥವಾ ಸಿದ್ಧ ಉತ್ಪನ್ನವಿದ್ದರೆ(deployable product) ನಿಮ್ಮ ಸಂಸ್ಥೆಯ ಗಾತ್ರ ಅಥವಾ ವಯಸ್ಸನ್ನು ಲೆಕ್ಕಿಸದೆ ನೀವು ಅರ್ಜಿ ಸಲ್ಲಿಸಬಹುದು.

### 9. ವೈಯಕ್ತಿಕ ರೈತರು ಅಥವಾ ರೈತ ಗುಂಪುಗಳು ಅರ್ಜಿ ಸಲ್ಲಿಸಬಹುದೇ?

**ಉತ್ತರ:** ಹೌದು. ವಿಶೇಷವಾಗಿ 'ವರ್ಗ 4' (ಸಮುದಾಯ ನೇತೃತ್ವದ ಸಂಗ್ರಹಣೆ ಮತ್ತು ಉದ್ಯಮ ನಾವೀನ್ಯತೆಗಳು) ಅಡಿಯಲ್ಲಿ ವೈಯಕ್ತಿಕ ರೈತರು, ರೈತ ಗುಂಪುಗಳು, ಸಹಕಾರ ಸಂಘಗಳು, ಸ್ವಸಹಾಯ ಗುಂಪುಗಳು (SHG) ಮತ್ತು ಉತ್ಪಾದಕ ಸಂಘಗಳು ಅರ್ಜಿ ಸಲ್ಲಿಸಲು ಮುಕ್ತ ಅವಕಾಶವಿದೆ. ಇತರ ವರ್ಗಗಳಿಗೆ ಕಾನೂನುಬದ್ಧವಾಗಿ ನೋಂದಾಯಿತ ಸಂಸ್ಥೆಯ ಅಗತ್ಯವಿರುತ್ತದೆ.

### 10. ವಿದೇಶಿ ಸಂಸ್ಥೆಗಳು ಅರ್ಜಿ ಸಲ್ಲಿಸಬಹುದೇ?

**ಉತ್ತರ:** ಹೌದು, ಆದರೆ ಒಂದು ಪ್ರಮುಖ ಷರತ್ತು ಇದೆ. ವಿದೇಶಿ ಸಂಸ್ಥೆಗಳು ಭಾರತದಲ್ಲಿ ನೋಂದಾಯಿತ ಕಾನೂನು ಘಟಕವನ್ನು ಹೊಂದಿರಬೇಕು ಮತ್ತು ಅವರ ಪರಿಹಾರವು ಈಗಾಗಲೇ ಭಾರತದಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಸಾಬೀತುಪಡಿಸಬೇಕು. ಕೇವಲ ಭಾರತೀಯ ಮಾರುಕಟ್ಟೆಗೆ ಪ್ರವೇಶಿಸಲು ಯೋಜಿಸುತ್ತಿರುವ ಮತ್ತು ಇಲ್ಲಿ ಅಸ್ತಿತ್ವ ಹೊಂದಿಲ್ಲದ ವಿದೇಶಿ ಸಂಸ್ಥೆಗಳು ಈ ಹಂತದಲ್ಲಿ ಅರ್ಹರಲ್ಲ.

### 11. ನಾವು ಆಡಿಟ್ ಮಾಡಿದ ಹಣಕಾಸು ವರದಿ ಇಲ್ಲದ ಎಫ್‌ಪಿಒ ಅಥವಾ ಎಮ್‌ಎಸ್‌ಎಮ್‌ಇ ಆಗಿದ್ದೇವೆ - ನಾವು ಅರ್ಜಿ ಸಲ್ಲಿಸಬಹುದೇ?

**ಉತ್ತರ:** ಹೌದು. **ಎಮ್‌ಎಸ್‌ಎಮ್‌ಇ** ಮತ್ತು **ಎಫ್‌ಪಿಒ** ಗಳ ಬಳಿ ಆಡಿಟ್ ಮಾಡಿದ ವರದಿಗಳು ಇಲ್ಲದಿರಬಹುದು ಎಂಬುದನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಅಂತಹ ಸಂಸ್ಥೆಗಳು ಕಳೆದ 2 ವರ್ಷಗಳ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳನ್ನು ದಾಖಲೆಯಾಗಿ ಸಲ್ಲಿಸಬಹುದು. ಅರ್ಹತಾ ಪರೀಕ್ಷಕರು (Eligibility Checker) ಆಡಿಟ್ ವರದಿ ಅಥವಾ ಬ್ಯಾಂಕ್ ಸ್ಟೇಟ್‌ಮೆಂಟ್ ಇದೆಯೇ ಎಂದು ಕೇಳಿದಾಗ, ನೀವು "ಹೌದು" ಎಂದು ಉತ್ತರಿಸಬೇಕು.

## ಅರ್ಜಿ ನಮೂನೆ (The Application Form)

### 12. ಅರ್ಜಿ ನಮೂನೆಯಲ್ಲಿ ಏನೆಲ್ಲಾ ಇರುತ್ತದೆ?

**ಉತ್ತರ:** ಪ್ರತಿಯೊಂದು ವರ್ಗಕ್ಕೂ ಪ್ರತ್ಯೇಕ ಅರ್ಜಿ ನಮೂನೆ ಇರುತ್ತದೆ. ಇದು ಸಂಘಟಿತ ಆರು ಭಾಗಗಳನ್ನು ಒಳಗೊಂಡಿದೆ:

* ಭಾಗ A: ಸಂಸ್ಥೆಯ ವಿವರಗಳು
* ಭಾಗ B: ಪರಿಹಾರದ ನಾವೀನ್ಯತೆ ಮತ್ತು ತಾಂತ್ರಿಕ ಕಾರ್ಯಸಾಧ್ಯತೆ
* ಭಾಗ C: ಸ್ಕೇಲೆಬಿಲಿಟಿ ಮತ್ತು ಮಾರುಕಟ್ಟೆ ಕಾರ್ಯಸಾಧ್ಯತೆ
* ಭಾಗ D: ವಿವಿಧ ಬೆಳೆಗಳಿಗೆ ಅನ್ವಯಿಸುವಿಕೆ (Replicability)
* ಭಾಗ E: ಕರ್ನಾಟಕ ರಾಜ್ಯದಲ್ಲಿ ಈ ಚ್ಯಾಲೆಂಜ್‌ಅನ್ನು ಕಾರ್ಯಗತಗೊಳಿಸುವ ಸಾಮರ್ಥ್ಯ ಮತ್ತು ದೃಷ್ಟಿಕೋನ
* ಭಾಗ F: ಕಡ್ಡಾಯ ಅನುಸರಣೆ ಘೋಷಣೆಗಳು

ಅರ್ಜಿ ಆರಂಭಿಸುವ ಮೊದಲು 'ಅರ್ಹತಾ ಪರೀಕ್ಷಕ' (Eligibility Checker) ವಿಭಾಗವನ್ನು ಪೂರ್ಣಗೊಳಿಸುವುದು ಕಡ್ಡಾಯ.

### 13. ಅರ್ಜಿಯ ಭಾಗವಾಗಿ ನಾನು ಯಾವ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕು?

**ಉತ್ತರ:** ಕಡ್ಡಾಯ ದಾಖಲೆಗಳು: (1) ಸಂಸ್ಥೆಯ ನೋಂದಣಿ ಪ್ರಮಾಣಪತ್ರ ಅಥವಾ ದಿನಾಂಕ ಮತ್ತು ನೋಂದಣಿಯ ಪ್ರಕಾರದ ಕುರಿತು ದಾಖಲೆ (2) ಕಳೆದ 2 ವರ್ಷಗಳ ಆಡಿಟ್ ಮಾಡಿದ ಹಣಕಾಸು ವರದಿ ಅಥವಾ **ಎಫ್‌ಪಿಒ** ಅಥವಾ **ಎಮ ಎಸ್ ಎಮ್‌ಇ** ಗಳಿಗೆ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು. ಉಳಿದ ದಾಖಲೆಗಳು (ಪೈಲಟ್ ಫಲಿತಾಂಶಗಳು ಅಥವಾ ತಾಂತ್ರಿಕ ವಿವರಗಳು) ಐಚ್ಛಿಕವಾಗಿದ್ದರೂ, ಅವುಗಳನ್ನು ಸಲ್ಲಿಸುವುದು ನಿಮ್ಮ ಅರ್ಜಿಯನ್ನು ಬಲಪಡಿಸುತ್ತದೆ.

### 14. ಅರ್ಜಿ ನಮೂನೆ ಯಾವ ಭಾಷೆಯಲ್ಲಿ ಲಭ್ಯವಿದೆ?

**ಉತ್ತರ:** ಅರ್ಜಿ ನಮೂನೆಯು ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಲಭ್ಯವಿದೆ.

### 15. ಅರ್ಜಿಯಲ್ಲಿ ನಾನು ಯಾವ ಭಾಷೆಯನ್ನು ಬಳಸಬೇಕು?

**ಉತ್ತರ:** ನೀವು ಇಂಗ್ಲಿಷ್ ಅಥವಾ ಕನ್ನಡದಲ್ಲಿ ಅರ್ಜಿಯನ್ನು ಸಲ್ಲಿಸಬಹುದು. ಎರಡೂ ಭಾಷೆಗಳನ್ನು ಸಮಾನವಾಗಿ ಸ್ವೀಕರಿಸಲಾಗುತ್ತದೆ.

### 16. ಉತ್ತರಗಳಿಗೆ ಪದಗಳ ಮಿತಿ ಇದೆಯೇ?

**ಉತ್ತರ:** ಹೌದು. ಪ್ರತಿಯೊಂದು ಪ್ರಶ್ನೆಗೆ ಗರಿಷ್ಠ ಪದಗಳ ಮಿತಿಯನ್ನು (ಉದಾಹರಣೆಗೆ: ಗರಿಷ್ಠ 200 ಅಥವಾ ಗರಿಷ್ಠ 300 ಪದಗಳು) ನೀಡಲಾಗಿದೆ. ದಯವಿಟ್ಟು ಇದನ್ನು ಪಾಲಿಸಿ.ಇದರಿಂದ ಕೇಂದ್ರಿಕೃತ ಪ್ರತಿಕ್ರಿಯೆಗಳು ನೀಡಲು ಹಾಗೂ ಎಲ್ಲಾ ಅರ್ಜಿಗಳ ಸ್ಥಿರವಾದ ಮೌಲ್ಯಮಾಪನ ಮಾಡಲು ಸಹಾಯವಾಗುತ್ತದೆ.

### 17. ನನ್ನ ಪರಿಹಾರವು ಏಳು ಆದ್ಯತೆಯ ಬೆಳೆಗಳ ಹೊರತಾಗಿ ಇತರ ಬೆಳೆಗಳಿಗೆ ಕೆಲಸ ಮಾಡಿದರೆ ನಾನು ಅರ್ಜಿ ಸಲ್ಲಿಸಬಹುದೇ?

**ಉತ್ತರ:** ಹೌದು. ಈ ಕಾರ್ಯಕ್ರಮವು ಈರುಳ್ಳಿ, ಮಾವು, ಬಾಳೆಹಣ್ಣು, ಟೊಮೆಟೊ, ದ್ರಾಕ್ಷಿ, ದಾಳಿಂಬೆ ಮತ್ತು ಅನಾನಸ್ ಬೆಳೆಗಳಿಗೆ ಹೆಚ್ಚಿನ ಆದ್ಯತೆ ನೀಡಿದ್ದರೂ, ಇತರೆ ಬೆಳೆಗಳ ಪರಿಹಾರಗಳನ್ನು ಸ್ವಾಗತಿಸಲಾಗುತ್ತದೆ. ಆದರೆ ಆ ಪರಿಹಾರಗಳನ್ನು ಈ ಏಳು ಆದ್ಯತೆಯ ಬೆಳೆಗಳಿಗೆ ಹೇಗೆ ಅಳವಡಿಸಬಹುದು ಎಂಬುದನ್ನು ನೀವು ಭಾಗ ಆ ಯಲ್ಲಿ ವಿವರಿಸಬೇಕಾಗುತ್ತದೆ.

### 18. ಸಲ್ಲಿಕೆಯ ನಂತರ ನಾನು ಅರ್ಜಿಯನ್ನು ಎಡಿಟ್ ಮಾಡಬಹುದೇ?

**ಉತ್ತರ:** ಇಲ್ಲ. ಒಮ್ಮೆ ಅರ್ಜಿ ಸಲ್ಲಿಕೆಯಾದ ನಂತರ ಎಡಿಟ್ ಮಾಡಲು ಅವಕಾಶವಿಲ್ಲ. ಆದ್ದರಿಂದ ಅಂತಿಮವಾಗಿ ಅರ್ಜಿ ಸಲ್ಲಿಸುವ ಮೊದಲು ಎಲ್ಲಾ ವಿಭಾಗಗಳನ್ನು ಸರಿಯಾಗಿ ಪರಿಶೀಲಿಸಿ. ವಿವಿಧ ವಿಭಾಗಗಳ ನಡುವೆ ಹೋಗಲು ಮತ್ತು ನಿಮ್ಮ ಉತ್ತರಗಳನ್ನು ಪರಿಶೀಲಿಸಲು 'ಟ್ಯಾಬ್ ನ್ಯಾವಿಗೇಷನ್' (tab navigation) ಬಳಸಿ. ನೀವು ಈಗಾಗಲೇ ಅರ್ಜಿಯನ್ನು ಸಲ್ಲಿಸಿದ್ದು, ಅದರಲ್ಲಿ ಯಾವುದಾದರೂ ಗಂಭೀರ ದೋಷವಿದೆ ಎಂದು ನಿಮಗೆ ಅನಿಸಿದರೆ, ದಯವಿಟ್ಟು ಅಧಿಕೃತ ಸಂವಹನ ಮಾಧ್ಯಮಗಳ ಮೂಲಕ ಸವಾಲಿನ ತಂಡವನ್ನು (challenge team) ತಕ್ಷಣವೇ ಸಂಪರ್ಕಿಸಿ.

### 19. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಯಾವುದು?

**ಉತ್ತರ:** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 31 ಮೇ 2026.

## ಮೌಲ್ಯಮಾಪನ ಮತ್ತು ಆಯ್ಕೆ

### 20. ಆಯ್ಕೆಯಾದ ಅಭ್ಯರ್ಥಿಗಳಿಗೆ ಅಂತಿಮ ಮೌಲ್ಯಮಾಪನಕ್ಕೂ ಮೊದಲು ಬೆಂಬಲ ಸಿಗುತ್ತದೆಯೇ?

**ಉತ್ತರ:** ಹೌದು. ಸೆಮಿಫೈನಲಿಸ್ಟ್‌ಗಳಾಗಿ ಆಯ್ಕೆಯಾದ ಸಂಸ್ಥೆಗಳಿಗೆ ತಮ್ಮ ಪ್ರಸ್ತುತಿ (Pitch) ಮತ್ತು ಅನುಷ್ಠಾನ ಯೋಜನೆಗಳನ್ನು ಬಲಪಡಿಸಲು ಸಾಮರ್ಥ್ಯ ವರ್ಧನೆ (Capacity Building) ಬೆಂಬಲವನ್ನು ನೀಡಲಾಗುತ್ತದೆ.ಅಂತಿಮ (Final) ಹಂತದ ಆಯ್ಕೆ ಪ್ರಕ್ರಿಯೆಗೆ ಮುನ್ನ ಇದು ನಡೆಯಲಿದೆ.

### 21. ಆಯ್ಕೆಯಾದ ನಂತರ ವಿಜೇತರಿಗೆ ಏನು ಸಿಗುತ್ತದೆ?

**ಉತ್ತರ:** ವಿಜೇತರಿಗೆ ಸಿಗುವ ನಿರ್ದಿಷ್ಟ ಬೆಂಬಲ,ಆರ್ಥಿಕ ನೆರವು ಅಥವಾ ಪಾಲುದಾರಿಕೆಯ ಪ್ರಾಯೋಜನಗಳ ವಿವರಗಳನ್ನು ಅಧಿಕೃತ ಚಾಲೆಂಜ್ ಚಾನೆಲ್ ಹಾಗೂ ಬ್ರೋಷರ್‌ನಲ್ಲಿ ನೀಡಲಾಗುತ್ತದೆ. ಮುಖ್ಯವಾಗಿ, ವಿಜೇತರನ್ನು ಹೂಡಿಕೆದಾರರು, ಸರ್ಕಾರಿ ಇಲಾಖೆಗಳು ಮತ್ತು ಮಾರುಕಟ್ಟೆ ಜಾಲದೊಂದಿಗೆ ಜೋಡಿಸಲಾಗುತ್ತದೆ. ಅನುಷ್ಠಾನದ ಮಾರ್ಗಗಳು ಮತ್ತು ಹೂಡಿಕೆದಾರರ/ಪಾಲುದಾರರ ಜಾಲಗಳು, ಇದರಲ್ಲಿ ಖರೀದಿದಾರರು, ಹೂಡಿಕೆದಾರರು ಮತ್ತು ಮಾರುಕಟ್ಟೆ ಸಂಪರ್ಕ ಪಾಲುದಾರರೊಂದಿಗೆ ವಿಶೇಷವಾಗಿ ವಿನ್ಯಾಸಗೊಳಿಸಲಾದ **'ಡೀಲ್ ರೂಮ್'** (Deal Room) ವ್ಯವಸ್ಥೆಯೂ ಸೇರಿದೆ. ಕರ್ನಾಟಕದ ತೋಟಗಾರಿಕಾ ಮೌಲ್ಯ ಸರಪಳಿಯಲ್ಲಿ (value chains) ನೈಜ ಅನುಷ್ಠಾನ ಮತ್ತು ವಿಸ್ತರಣೆಗೆ (scaling) ಪೂರಕವಾಗುವಂತೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ.

## ಚಾಲೆಂಜ್ ವರ್ಗಗಳು (Challenge Categories)

### 22. ಏಳು ಚಾಲೆಂಜ್ ವರ್ಗಗಳು ಯಾವುದು? ಅವುಗಳ ಪೈಕಿ ಯಾವ ವರ್ಗ ನನ್ನ ಪರಿಹಾರಕ್ಕೆ ಸರಿಹೊಂದುತ್ತದೆ ಎನ್ನುವುದು ತಿಳಿಯುವುದು ಹೇಗೆ ?

**ಉತ್ತರ:** ಕೊಯ್ಲಿನ ನಂತರದ ಮೌಲ್ಯ ಸರಪಳಿಯ (post-harvest value chain) ವಿವಿಧ ಹಂತಗಳನ್ನು ಗುರಿಯಾಗಿಸಿಕೊಂಡು ಈ ಸವಾಲನ್ನು ಏಳು ವರ್ಗಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ವರ್ಗದ ಮುಖ್ಯ ಉದ್ದೇಶವನ್ನು ಅರ್ಥಮಾಡಿಕೊಳ್ಳುವುದು ನಿಮ್ಮ ಪರಿಹಾರಕ್ಕೆ ಸೂಕ್ತವಾದ ವಿಭಾಗವನ್ನು ಗುರುತಿಸಲು ಸಹಾಯ ಮಾಡುತ್ತದೆ.

**ವರ್ಗ 1 —** ಕೊಯ್ಲಿನ ನಂತರದ ಮೌಲ್ಯ ಸರಪಳಿ ಪರಿಹಾರಗಳು: ಜಮೀನಿನಲ್ಲಿ ಅಥವಾ ಜಮೀನಿನ ಸಮೀಪದಲ್ಲಿ ಬೆಳೆಗಳನ್ನು ವರ್ಗೀಕರಿಸುವುದು, ಪೂರ್ವ ಶೀಥಲೀಕರಣ (pre cooling) ಮಾಡುವುದು ಅಥವಾ ಕೊಯ್ಲು ಮಾಡಿದ ತಕ್ಷಣ ಉತ್ಪನ್ನಗಳನ್ನು ಸಂಸ್ಕರಿಸುವುದು. ಪ್ಯಾಕ್‌ಹೌಸ್‌ಗಳು, ಕಡಿಮೆ ವೆಚ್ಚದ ಶೀಥಲಗೃಹಗಳು, ಹಣ್ಣು ಮಾಗಿಸುವ ನಿರ್ವಹಣೆ (ripening management), ಸಂಚಾರಿ ಸಂಸ್ಕರಣಾ ಉಪಕರಣಗಳು ಮತ್ತು ಜಮೀನಿನಲ್ಲೇ ಬಳಸಬಹುದಾದ ಶ್ರೇಣೀಕರಣದ (grading) ಉಪಕರಣಗಳ ಬಗ್ಗೆ ಯೋಚಿಸಿ. ನಿಮ್ಮ ಪರಿಹಾರವು ಜಮೀನಿನ ಹಂತದಲ್ಲಿಯೇ (farm-gate) ಬೆಳೆ ಹಾಳಾಗುವುದನ್ನು ತಡೆಗಟ್ಟುವಂತಿದ್ದರೆ, ಈ ವರ್ಗವು ನಿಮಗೆ ಸೂಕ್ತವಾಗಿದೆ.

**ವರ್ಗ 2 —** ಸುಸ್ಥಿರ ಪ್ಯಾಕೇಜಿಂಗ್ ನಾವೀನ್ಯತೆಗಳು: ಸಾರಿಗೆ ಮತ್ತು ಶೇಖರಣೆಯ ಸಮಯದಲ್ಲಿ ಉತ್ಪನ್ನಗಳನ್ನು ರಕ್ಷಿಸುವ ಪ್ಯಾಕೇಜಿಂಗ್,ಕಂಟೆನರ್ಸ್ ವ್ಯವಸ್ಥೆಗಳು. ಇದು ಜೈವಿಕವಾಗಿ ಕೊಳೆಯುವ (biodegradable) ಪ್ಯಾಕೇಜಿಂಗ್, ಮರುಬಳಕೆ ಮಾಡಬಹುದಾದ ಕ್ರೇಟ್‌ಗಳು, ಮಾರ್ಪಡಿಸಿದ ವಾತಾವರಣದ ಪ್ಯಾಕೇಜಿಂಗ್ (Modified Atmosphere Packaging-MAP) ಮತ್ತು ಸ್ಮಾರ್ಟ್ ಫ್ರೆಶ್‌ನೆಸ್ ಇಂಡಿಕೇಟರ್‌ಗಳನ್ನು (ತಾಜಾತನ ಸೂಚಕಗಳು) ಒಳಗೊಂಡಿದೆ. ಉತ್ಪನ್ನಗಳನ್ನು ಪ್ಯಾಕ್ ಮಾಡುವ ವಿಧಾನದ ಬಗ್ಗೆ ನಿಮ್ಮ ನಾವೀನ್ಯತೆ ಇದ್ದರೆ, ಇದು ನಿಮಗಾಗಿರುವ ವರ್ಗವಾಗಿದೆ.

**ವರ್ಗ 3 —** ಸಮರ್ಪಕವಾದ ಲಾಜಿಸ್ಟಿಕ್ಸ್ ಆಪ್ಟಿಮೈಸೇಶನ್ ಪರಿಹಾರಗಳು: ಕೃಷಿ ಉತ್ಪನ್ನಗಳನ್ನು ಜಮೀನಿನಿಂದ ಮಾರುಕಟ್ಟೆಗೆ ಸಾಗಿಸುವ ಪ್ರಕ್ರಿಯೆಯನ್ನು ಸುಧಾರಿಸುವ ಪರಿಹಾರಗಳಿಗಾಗಿ ಈ ವರ್ಗವನ್ನು ರೂಪಿಸಲಾಗಿದೆ; ಇದು ಸಾರಿಗೆ ವೇಳಾಪಟ್ಟಿ, ಲೋಡ್ ಮ್ಯಾಚಿಂಗ್, ಕೊನೆಯ ಹಂತದ ಶೈತ್ಯೀಕರಣ (last-mile cooling), ಹಂಚಿಕೆಯ ಕೋಲ್ಡ್–ಚೈನ್ ಸೇವೆಗಳು, ರೂಟ್ ಆಪ್ಟಿಮೈಸೇಶನ್ ಮತ್ತು ವಾಹನಗಳ ಟ್ರ್ಯಾಕಿಂಗ್ ಅನ್ನು ಒಳಗೊಂಡಿದೆ. ನಿಮ್ಮ ಪರಿಹಾರವು ಸಾರಿಗೆಯ ಸಮಯದಲ್ಲಿ ತಗಲುವ ಸಮಯವನ್ನು, ವಿಳಂಬವನ್ನು ಅಥವಾ ಉತ್ಪನ್ನಗಳು ಹಾಳಾಗುವುದನ್ನು ಕಡಿಮೆ ಮಾಡುವುದಾದರೆ, ಇದು ನಿಮಗೆ ಸೂಕ್ತವಾದ ವರ್ಗವಾಗಿದೆ.

**ವರ್ಗ 4 —** ಸಮುದಾಯದ ನೇತೃತ್ವದ ಸಂಗ್ರಹಣೆ ಮತ್ತು ಉದ್ಯಮ ನಾವೀನ್ಯತೆಗಳು: ರೈತರು ತಮ್ಮ ಉತ್ಪನ್ನಗಳನ್ನು ಒಟ್ಟಾಗಿ ಸಂಗ್ರಹಿಸಲು, ಸಂಯೋಜಿಸಲು ಅಥವಾ ಮಾರುಕಟ್ಟೆ ಮಾಡಲು ಸಹಾಯ ಮಾಡುವ ಪರಿಹಾರಗಳಿಗಾಗಿ ಈ ವರ್ಗವಿದೆ; ಇದು ಎಫ್‌ಪಿಒ (FPO) ಮಾದರಿಗಳು, ಗ್ರಾಮ ಮಟ್ಟದ ಸಂಗ್ರಹಣಾ ಕೇಂದ್ರಗಳು, ಸಾಮೂಹಿಕ ಬ್ರ್ಯಾಂಡಿಂಗ್ ಅಥವಾ ಮಹಿಳಾ ನೇತೃತ್ವದ ಸಮುದಾಯ ಉದ್ಯಮಗಳ ಮೂಲಕ ಇರಬಹುದು. ನಿಮ್ಮ ಪರಿಹಾರವು ಸಣ್ಣ ಹಿಡುವಳಿದಾರರಿಗೆ ಸಾಮೂಹಿಕ ಮಾರುಕಟ್ಟೆ ಶಕ್ತಿಯನ್ನು ಒದಗಿಸುವುದಾದರೆ, ಇದು ನಿಮಗಾಗಿರುವ ವರ್ಗವಾಗಿದೆ.

**ವರ್ಗ 5 —** ರೈತ ಉತ್ಪಾದಕ ಸಂಸ್ಥೆಗಳು(FPO) ಗಳು ಮತ್ತು ಕೃಷಿ ಉದ್ಯಮಗಳಿಗೆ ನವೀನ ಹಣಕಾಸು ಸೇವೆಗಳ ಪರಿಹಾರಗಳು: ಕೊಯ್ಲಿನ ನಂತರದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಎಫ್‌ಪಿಒ (FPO) ಮತ್ತು ಕೃಷಿ ಉದ್ಯಮಗಳಿಗಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಲಾದ ಹಣಕಾಸು ಸೇವೆಗಳನ್ನು ಒದಗಿಸುವ ಪರಿಹಾರಗಳಿಗಾಗಿ ಈ ವರ್ಗವಿದೆ. ಇದು ಸಾಲ ಸೌಲಭ್ಯ, ಬಂಡವಾಳ (working capital), ವೇರ್‌ಹೌಸ್ ರಶೀದಿ ಆಧಾರಿತ ಹಣಕಾಸು, ಡಿಜಿಟಲ್ ಸಾಲ ನೀಡಿಕೆ ಮತ್ತು ವಿಮೆ–ಸಂಯೋಜಿತ ಉತ್ಪನ್ನಗಳನ್ನು ಒಳಗೊಂಡಿದೆ. ನಿಮ್ಮ ಪರಿಹಾರವು ನಷ್ಟವನ್ನು ಕಡಿಮೆ ಮಾಡುವ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಅಡ್ಡಿಯಾಗಿರುವ ಹಣಕಾಸಿನ ಕೊರತೆ/ ಅಂತರವನ್ನು ನೀಗಿಸುವುದಾದರೆ, ಇದು ನಿಮಗಾಗಿರುವ ವರ್ಗವಾಗಿದೆ.

**ವರ್ಗ 6 —** ಆಹಾರ ನಷ್ಟ ತಡೆಗಟ್ಟಲು ಡಿಜಿಟಲ್ ನಿರ್ಧಾರ ಬೆಂಬಲ ವ್ಯವಸ್ಥೆಗಳು: ಮೌಲ್ಯ ಸರಪಳಿಯ ವಿವಿಧ ಹಂತಗಳ (ಜಮೀನು, ಶೇಖರಣೆ, ಲಾಜಿಸ್ಟಿಕ್ಸ್, ಮಾರುಕಟ್ಟೆಗಳು) ದತ್ತಾಂಶವನ್ನು (Data) ಸಂಯೋಜಿಸುವ ಮತ್ತು ವಿವಿಧ ಪಾಲುದಾರರು ಉತ್ತಮ ಸಮನ್ವಯದೊಂದಿಗೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುವ ಪರಿಹಾರಗಳಿಗಾಗಿ ಈ ವರ್ಗವಿದೆ. ಇದು ಬಹು–ಪಾಲುದಾರರ ವೇದಿಕೆಗಳು (multi-stakeholder platforms), ಮುನ್ಸೂಚನಾ ವಿಶ್ಲೇಷಣೆ (predictive analytics), ಎಂಡ್–ಟು–ಎಂಡ್ ಟ್ರೇಸಿಬಿಲಿಟಿ ಮತ್ತು ಕೊಯ್ಲಿನಿಂದ ಮಾರುಕಟ್ಟೆಯವರೆಗಿನ ಸಮನ್ವಯ ವ್ಯವಸ್ಥೆಗಳನ್ನು ಒಳಗೊಂಡಿದೆ. ಕೇವಲ ಒಂದು ನಿರ್ದಿಷ್ಟ ಕೆಲಸವನ್ನು ಮಾಡುವ ಸ್ವತಂತ್ರ ಪರಿಕರಗಳು (standalone tools) ಸಾಮಾನ್ಯವಾಗಿ ವರ್ಗ 3 ಕ್ಕೆ ಹೆಚ್ಚು ಸೂಕ್ತವಾಗುತ್ತವೆ; ಆದರೆ ಅವುಗಳು ಹಲವು ಪಾಲುದಾರರ ನಡುವೆ ಉಪಯುಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಪ್ರೇರೇಪಿಸುವಂತಿದ್ದರೆ ಮಾತ್ರ ಈ ವರ್ಗಕ್ಕೆ ಸೇರುತ್ತವೆ.

**ವರ್ಗ 7 —** ವೃತ್ತಾಕಾರದ ಆರ್ಥಿಕತೆ (Circular Economy) ಮತ್ತು ನಷ್ಟದಿಂದ ಮೌಲ್ಯವರ್ಧನೆ ನೀಡುವ ಪರಿಹಾರಗಳು: ಪ್ರಾಥಮಿಕ ಮಾರುಕಟ್ಟೆಯನ್ನು ಪ್ರವೇಶಿಸಲು ಸಾಧ್ಯವಾಗದ ಹೆಚ್ಚುವರಿ ಬೆಳೆ, ಗುಣಮಟ್ಟದಲ್ಲಿ ಹಿಂದೆ ಉಳಿದಿರುವ ಅಥವಾ ತಿರಸ್ಕರಿಸಲ್ಪಟ್ಟ ಉತ್ಪನ್ನಗಳಿಂದ ಹೊಸ ಉತ್ಪನ್ನಗಳನ್ನು ಅಥವಾ ಮೌಲ್ಯವನ್ನು ಸೃಷ್ಟಿಸುವ ಪರಿಹಾರಗಳಿಗಾಗಿ ಈ ವರ್ಗವಿದೆ. ನಿರ್ಜಲೀಕರಣ ಘಟಕಗಳು (dehydration units), ಜ್ಯೂಸ್ ಮತ್ತು ಪ್ಯೂರಿ ಸಂಸ್ಕರಣೆ, ಸಾವಯವ ತ್ಯಾಜ್ಯದಿಂದ ಜೈವಿಕ ಅನಿಲ (biogas) ಉತ್ಪಾದನೆ, ಗೊಬ್ಬರ ತಯಾರಿಕೆ ಮತ್ತು ಉಪ–ಉತ್ಪನ್ನಗಳ ಹೊರತೆಗೆಯುವಿಕೆಯ ಬಗ್ಗೆ ಯೋಚಿಸಿ. ನಿಮ್ಮ ಪರಿಹಾರವು ಆಹಾರದ ನಷ್ಟವನ್ನು ಆರ್ಥಿಕ ಮೌಲ್ಯವಾಗಿ ಪರಿವರ್ತಿಸುವುದಾದರೆ ಇದು ನಿಮಗಾಗಿರುವ ವರ್ಗವಾಗಿದೆ.

ನಿಮ್ಮ ಪರಿಹಾರದ ಮುಖ್ಯ ಹಸ್ತಕ್ಷೇಪವನ್ನು ಅತ್ಯುತ್ತಮವಾಗಿ ಪ್ರತಿಬಿಂಬಿಸುವ ವರ್ಗದ ಅಡಿಯಲ್ಲಿ ಅರ್ಜಿ ಸಲ್ಲಿಸಿ. ಅನೇಕ ಪರಿಹಾರಗಳು ಸ್ವಾಭಾವಿಕವಾಗಿ ಒಂದಕ್ಕಿಂತ ಹೆಚ್ಚು ವರ್ಗಗಳಲ್ಲಿ ವ್ಯಾಪಿಸಿರುತ್ತವೆ — ಇದನ್ನು ಉದ್ದೇಶಪೂರ್ವಕವಾಗಿಯೇ ವಿನ್ಯಾಸಗೊಳಿಸಲಾಗಿದೆ. ನಿಮ್ಮ ಪರಿಹಾರದ ಪ್ರಮುಖ ಮೌಲ್ಯವು ಎಲ್ಲಿ ಹೆಚ್ಚಾಗಿ ಕೇಂದ್ರೀಕೃತವಾಗಿದೆಯೋ ಅಂತಹ ವರ್ಗವನ್ನು ಆರಿಸಿಕೊಳ್ಳಿ.

ನಿಮ್ಮ ಪರಿಹಾರದ ಮುಖ್ಯ ಹಸ್ತಕ್ಷೇಪವನ್ನು ಅತ್ಯುತ್ತಮವಾಗಿ ಪ್ರತಿಬಿಂಬಿಸುವ ವರ್ಗದ ಅಡಿಯಲ್ಲಿ ಅರ್ಜಿ ಸಲ್ಲಿಸಿ. ಅನೇಕ ಪರಿಹಾರಗಳು ಸ್ವಾಭಾವಿಕವಾಗಿ ಒಂದಕ್ಕಿಂತ ಹೆಚ್ಚು ವರ್ಗಗಳಲ್ಲಿ ವ್ಯಾಪಿಸಿರುತ್ತವೆ — ಇದನ್ನು ಉದ್ದೇಶಪೂರ್ವಕವಾಗಿಯೇ ವಿನ್ಯಾಸಗೊಳಿಸಲಾಗಿದೆ. ನಿಮ್ಮ ಪರಿಹಾರದ ಪ್ರಮುಖ ಮೌಲ್ಯವು ಎಲ್ಲಿ ಹೆಚ್ಚಾಗಿ ಕೇಂದ್ರೀಕೃತವಾಗಿದೆಯೋ ಅಂತಹ ವರ್ಗವನ್ನು ಆರಿಸಿಕೊಳ್ಳಿ.

### 23. ನಮ್ಮ ಸಂಸ್ಥೆಯು ವಿವಿಧ ವರ್ಗಗಳಲ್ಲಿ ಹಲವಾರು ಪರಿಹಾರಗಳನ್ನು ಹೊಂದಿದೆ - ನಾವು ಇನ್ನೂ ಅರ್ಜಿ ಸಲ್ಲಿಸಬಹುದೇ?

**ಉತ್ತರ:** ಹೌದು. ನಿಮ್ಮ ಸಂಸ್ಥೆಯು ನಿಜವಾಗಿಯೂ ವಿಭಿನ್ನ ವರ್ಗಗಳಿಗೆ ಸಂಬಂಧಿಸಿದ ಹಲವಾರು ವಿಭಿನ್ನ ಪರಿಹಾರಗಳನ್ನು ಹೊಂದಿದ್ದರೆ, ಪ್ರತಿಯೊಂದು ವರ್ಗಕ್ಕೂ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬಹುದು. ಪ್ರತಿಯೊಂದು ಅರ್ಜಿಯೂ ಆ ವರ್ಗದ ಅರ್ಹತಾ ಮಾನದಂಡಗಳನ್ನು ಪೂರೈಸುವಂತಹ ವಿಭಿನ್ನವಾದ ಪರಿಹಾರವನ್ನು ಹೊಂದಿರಬೇಕು. ಅಂದರೆ, ಒಂದು ಅರ್ಜಿಗೆ ಒಂದು ಪರಿಹಾರ ಮತ್ತು ಒಂದು ವರ್ಗಕ್ಕೆ ಒಂದು ಅರ್ಜಿ ಮಾತ್ರ ಸಲ್ಲಿಸಲು ಅವಕಾಶವಿರುತ್ತದೆ.

### 24 : ನನ್ನ ಪರಿಹಾರವು ಒಂದಕ್ಕಿಂತ ಹೆಚ್ಚು ವರ್ಗಗಳಲ್ಲಿ ವ್ಯಾಪಿಸಿದೆ - ನಾನು ಯಾವುದರ ಅಡಿಯಲ್ಲಿ ಅರ್ಜಿ ಸಲ್ಲಿಸಬೇಕು?

**ಉತ್ತರ:** ದಯವಿಟ್ಟು ಮೇಲೆ ನೀಡಿರುವ ಪ್ರಶ್ನೆ 22 ಅನ್ನು ಗಮನಿಸಿ, ಅಲ್ಲಿ ಪ್ರತಿಯೊಂದು ವರ್ಗದ ವ್ಯಾಖ್ಯಾನ ಮತ್ತು ವ್ಯಾಪ್ತಿಯನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ನಿಮ್ಮ ಪರಿಹಾರದ ಪ್ರಮುಖ ಮೌಲ್ಯವು ಎಲ್ಲಿ ಅಡಗಿದೆಯೋ ಮತ್ತು ನಿಮ್ಮ ಮುಖ್ಯ ಹಸ್ತಕ್ಷೇಪವನ್ನು (primary intervention) ಯಾವುದು ಅತ್ಯುತ್ತಮವಾಗಿ ಪ್ರತಿನಿಧಿಸುತ್ತದೆಯೋ, ಆ ವರ್ಗದ ಅಡಿಯಲ್ಲಿ ಅರ್ಜಿ ಸಲ್ಲಿಸಿ. ಪರಿಹಾರಗಳು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ಒಳಗೊಂಡಿರಬಹುದು ಎಂಬ ಅಂಶವನ್ನು ಗುರುತಿಸಿಯೇ ಈ ಸವಾಲನ್ನು ವಿನ್ಯಾಸಗೊಳಿಸಲಾಗಿದೆ.

ಪ್ರಶ್ನೆ 25: **ನಾನು ಎಫ್‌ಪಿಒ (FPO) ಗಳ ಮಾರುಕಟ್ಟೆ ಸಂಪರ್ಕದ (Market Linkages) ಕುರಿತು ಕೆಲಸ ಮಾಡುತ್ತಿದ್ದೇನೆ — ನನಗೆ ಯಾವ ವರ್ಗವು ಸೂಕ್ತವಾಗಿದೆ?**

**ಉತ್ತರ:** ಇದು ನಿಮ್ಮ ಮುಖ್ಯ ಹಸ್ತಕ್ಷೇಪವನ್ನು (primary intervention) ಅವಲಂಬಿಸಿರುತ್ತದೆ.

- ಒಂದು ವೇಳೆ ನೀವು ಎಫ್‌ಪಿಒಗಳಿಗೆ ಕೊಯ್ಲಿನ ನಂತರದ ಕಾರ್ಯಾಚರಣೆಗಳಲ್ಲಿ ಹೂಡಿಕೆ ಮಾಡಲು **ಹಣಕಾಸಿನ ನೆರವು** ನೀಡುತ್ತಿದ್ದರೆ, **ವರ್ಗ 5** ಕ್ಕೆ ಅರ್ಜಿ ಸಲ್ಲಿಸಿ.
- ನೀವು **ಸಮುದಾಯ ಸಂಗ್ರಹಣಾ ಕೇಂದ್ರಗಳನ್ನು** ಅಥವಾ ಸಾಮೂಹಿಕ ಮಾರುಕಟ್ಟೆ ಮಾದರಿಗಳನ್ನು ನಿರ್ಮಿಸುತ್ತಿದ್ದರೆ, ವರ್ಗ 4 ಕ್ಕೆ ಅರ್ಜಿ ಸಲ್ಲಿಸಿ.
- ಎಫ್‌ಪಿಒಗಳು ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುವ **ಡಿಜಿಟಲ್ ಪರಿಕರಗಳನ್ನು** ನೀವು ಒದಗಿಸುತ್ತಿದ್ದರೆ, **ವರ್ಗ 6** ಕ್ಕೆ ಅರ್ಜಿ ಸಲ್ಲಿಸಿ.
- ನೀವು ಎಫ್‌ಪಿಒಗಳಿಗೆ **ಲಾಜಿಸ್ಟಿಕ್ಸ್ (ಸಾರಿಗೆ) ಸೇವೆಗಳನ್ನು** ಒದಗಿಸುತ್ತಿದ್ದರೆ, **ವರ್ಗ 3** ಕ್ಕೆ ಅರ್ಜಿ ಸಲ್ಲಿಸಿ.
- ಮೇಲೆ ನೀಡಿರುವ ಪ್ರಶ್ನೆ 22 ಅನ್ನು ಗಮನಿಸಿ, ಅಲ್ಲಿ ಪ್ರತಿಯೊಂದು ವರ್ಗದ ವ್ಯಾಖ್ಯಾನ ಗುರುತಿಸುವಿಕೆಗೆ ಸಹಾಯಕವಾಗಿದೆ.

*ಈ ಪ್ರಶ್ನೋತ್ತರಗಳಲ್ಲಿ (FAQ) ಉತ್ತರಿಸದ ಯಾವುದೇ ಪ್ರಶ್ನೆಗಳಿದ್ದಲ್ಲಿ, ದಯವಿಟ್ಟು ಅಧಿಕೃತ ಸಂವಹನ ಮಾಧ್ಯಮಗಳ ಮೂಲಕ* ***'ಸಂಪೂರ್ಣ ಗ್ರಾಂಡ್ ಚಾಲೆಂಜ್'*** *(Sampurna Grand Challenge) ತಂಡವನ್ನು ಸಂಪರ್ಕಿಸಿ. ಈ ಪ್ರಶ್ನೋತ್ತರಗಳು ಕೇವಲ ಮಾರ್ಗದರ್ಶನಕ್ಕಾಗಿ ಮಾತ್ರವಾಗಿದ್ದು, ಅಧಿಕೃತ ಸವಾಲಿನ ಮಾರ್ಗಸೂಚಿಗಳು ಮತ್ತು ನಿಯಮಗಳನ್ನು ಮೀರಿ ಇರುವುದಿಲ್ಲ.*